**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**
**ಪ್ರಕರಣ ಸಂಖ್ಯೆಃ ಎಸ್.ಸಿ 26/2020**

**ದಿನಾಂಕಃ 27.07.2022**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾಃ 15 (ಚಾ.ಸಾ.17 )**

| | | |
|---|---|---|
| ಹೆಸರು | ಃ | ಬಿ.ಸಿ.ಹರೀಶ |
| ತಂದೆಯ ಹೆಸರು | ಃ | ಚಂದ್ರೇಗೌಡ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಆರಕ್ಷಕ ನಿರೀಕ್ಷಕರು,<br>ಇಂದಿರಾನಗರ ಠಾಣೆ, ಬೆಂಗಳೂರು |
| ವಾಸ ಸ್ಥಳ | ಃ | ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ತಾಃ 18.12.2019 ರಿಂದ ತಾಃ 10.03.2020 ರವರೆಗೆ ಚನ್ನಪಟ್ಟಣ ಪೂರ್ವ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ತಾಃ 21.01.2020 ರಂದು ಬೆಳಿಗ್ಗೆ 8 ಗಂಟೆಗೆ ಪಿರ್ಯಾದಿ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದರು. ಸದರಿ ದೂರಿನ ಸಾರಾಂಶದ ಮೇರೆಗೆ ನಾನು ಠಾಣಾ ಮೊಕದ್ದಮೆ ಸಂಖ್ಯೆ 6/20 ನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದೂರನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ.8 ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.8(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಆರೋಪಿಯ ಪತ್ತೆಗಾಗಿ ಚಾಸಾ.9 ರಿಂದ 11 ರವರನ್ನು ನೇಮಿಸಿರುತ್ತೇನೆ. ಅದೇ ಬೆಳಿಗ್ಗೆ 11 ಗಂಟೆಗೆ ಆರೋಪಿಯನ್ನು ನನ್ನ ಮುಂದೆ ಹಾಜರುಪಡಿಸಿದರು. ಸದರಿ ಆರೋಪಿ ಈಗ ನ್ಯಾಯಾಲಯದ ಮುಂದೆ ಇರುತ್ತಾರೆ.

**4.** ಚಾಸಾ.5 ಮತ್ತು 6 ಇವರನ್ನು ಬರಮಾಡಿಕೊಂಡು ಕೃತ್ಯ ಸ್ಥಳದಲ್ಲಿ ಮಧ್ಯಾಹ್ನ 1.15 ರಿಂದ 2.00 ಗಂಟೆಯವರೆಗೆ ಮಹಜರ ಮಾಡಿ, ಸ್ಥಳದಲ್ಲಿದ್ದ ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತಮಿಶ್ರಿತ ವಲ್ಲದ ಮಣ್ಣನ್ನು ಅಮಾನತ್ತುಪಡಿಸಿಕೊಂಡೆನು. ಮಹಜರನ್ನು ಈಗಾಗಲೇ ನಿಪಿ.2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.2(ಎ) ಎಂದು ಗುರುತಿಸಲಾಯಿತು. ರಕ್ತಮಿಶ್ರಿತವಲ್ಲದ ಮಣ್ಣು ಮತ್ತು ರಕ್ತಮಿಶ್ರಿತ ಮಣ್ಣು ಗಳನ್ನು ಈಗಾಗಲೇ ಎಂ.ಓ.1 ಮತ್ತು 2 ಎಂದು ಗುರುತಿಸಲಾಗಿದೆ. ಆ ಬಗ್ಗೆ ನ್ಯಾಯಾಲಯಕ್ಕೆ ಪಿಎಫ್ ಸಲ್ಲಿಸಿದ್ದೇನೆ. ಮಾಲುಪಟ್ಟಿಯನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿಪಿ.9 ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.9(ಎ) ಎಂದು ಗುರುತಿಸಲಾಯಿತು.

**5.** ನಂತರ ಅದೇ ದಿನ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡೆನು. ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನು ಕೃತ್ಯಕ್ಕೆ ಉಪಯೋಗಿಸಿದ ಡ್ರಾಗರನ್ನು ತನ್ನ ಜೊತೆಯಲ್ಲಿ ಬಂದರೆ ಹಾಜರುಪಡಿಸುತ್ತೇನೆಂದು ಹೇಳಿದರು. ಮೂಲ ಸ್ವಇಚ್ಛಾ ಹೇಳಿಕೆ ಸಾಕ್ಷಿಯ ಕಡತದಲ್ಲಿದ್ದು ಅದನ್ನು ಅವರು ಈ ದಿನ ಹಾಜರುಪಡಿಸುತ್ತಿದ್ದು, ಸದರಿ ಸ್ವಇಚ್ಛಾ ಹೇಳಿಕೆಯ ಭಾಗವನ್ನು ಈಗ ನಿಪಿ.10 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ಈಗ ನಿಪಿ.10(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ.7 ಮತ್ತು 8 ರವರನ್ನು ಕೃತ್ಯ ಸ್ಥಳದಲ್ಲಿ ಕರೆಸಿ, ಅವರ ಸಮಕ್ಷಮ ಶೇರವ ಸರ್ಕಲ್‌ನ ಬಳಿಯಿರುವ ಸರ್ಕಾರಿ ತೋಪಿಗೆ ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಡ್ರಾಗರನ್ನು ತೋರಿಸಿದನು. ಅದನ್ನು ಮಧ್ಯಾಹ್ನ 2.30 ಗಂಟೆಯಿಂದ 3.15 ಗಂಟೆಯವರೆಗೆ ಮಹಜರ ಮಾಡಿ ವಶಪಡಿಸಿಕೊಂಡೆನು. ಮಜರನ್ನು ಈಗಾಗಲೇ ನಿಪಿ.4 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಈಗ ನಿಪಿ.4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಡಾಗರನ್ನು ಈಗಾಗಲೇ ಎಂ.ಓ.3 ಎಂದು ಗುರುತಿಸಲಾಗಿದೆ.

**6.** ಚಾಸಾ.12 ಮತ್ತು 14 ರವರನ್ನು ಗಾಯಾಳುವಿನ ಹೇಳಿಕೆ ಪಡೆಯಲು ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಿಕೊಟ್ಟೆನು. ನಂತರ ಆರೋಪಿಯನ್ನು ನ್ಯಾಯಾಂಗ

ಬಂಧನ ಕುರಿತು ನ್ಯಾಯಾಲಯಕ್ಕೆ ನನ್ನ ಸಿಬ್ಬಂದಿಗಳ ಮೂಲಕ ಹಾಜರುಪಡಿಸಿರುತ್ತೇನೆ.

**7.** ತಾಃ **12.02.2020** ರಂದು ಪಿರ್ಯಾದಿಯ ಮುಂದುವರೆದ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡೆನು.

**8.** ತಾಃ **24.02.2020** ರಂದು ವಶಪಡಿಸಿಕೊಂಡ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಎಫ್ ಎಸ್ ಎಲ್‌ಗೆ ಸಿಬ್ಬಂದಿಯಾದ ಚಾಸಾ.**13** ರವರ ಮೂಲಕ ಕಳುಹಿಸಿಕೊಟ್ಟೆನು.

**9.** ನಂತರ ಮುಂದಿನ ತನಿಖೆಯನ್ನು ಚಾಸಾ.**18** ರವರಿಗೆ ವಹಿಸಿಕೊಟ್ಟೆನು.

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ

**10.** ನಾನು ತನಿಖೆ ಪಡೆಯುವ ಮೊದಲು ಚನ್ನಪಟ್ಟಣ ಆಸ್ಪತ್ರೆಯಿಂದಾಗಲೀ ಅಥವಾ ವಿಕ್ಟೋರಿಯಾ ಆಸ್ಪತ್ರೆಯಿಂದಾಗಲೀ ನನಗೆ ಎಂಎಲ್‌ಸಿ ಇನ್ಟಿಮೇಷನ್ ಬಂದಿಲ್ಲ ಅಂದರೆ ಸರಿ.

**11.** ಈ ಪ್ರಕರಣ ದಾಖಲಾಗುವ ಸಮಯದಲ್ಲಿ ನಮ್ಮ ಠಾಣೆ ವ್ಯಾಪ್ತಿಯಲ್ಲಿ ಯಾವುದೇ ಗಾಂಜಾ ಪ್ರಕರಣಗಳು ವರದಿಯಾಗಿರಲಿಲ್ಲ ಮತ್ತು ದಾಖಲಾಗಿರಲಿಲ್ಲ. ಈ ಪ್ರಕರಣದಲ್ಲಿ ಗಾಂಜಾಗೆ ಸಂಬಂಧಪಟ್ಟಂತೆ ತನಿಖೆ ಮಾಡಿಲ್ಲ ಅಂದರೆ ಸರಿ.

**12.** ಆರೋಪಿಯ ವಿರುದ್ಧ ದ್ವೇಷದಿಂದ ದೂರು ಕೊಡಲಾಗಿದೆ ಎಂದು ಗೊತ್ತಾಗಿದ್ದರೂ ಕೂಡ ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ.

**13.** ಆರೋಪಿಯನ್ನು ಚನ್ನಪಟ್ಟಣದಲ್ಲಿರುವ ಅವರ ಅಜ್ಜಿ ಮನೆಯಿಂದ ಹಿಡಿದು ತಂದು ಕೇಸು ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ಎಂ.ಓ.**1** ಮತ್ತು **2** ನ್ನು ವಶಪಡಿಸಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅವುಗಳನ್ನು ಈ ಕೇಸಿಗಾಗಿ ಸುಳ್ಳು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ.

**14.** ಶೇರವ ಸರ್ಕಲ್ ಬಳಿಯಿರುವ ಸರ್ಕಾರಿ ತೋಪಿನ ಅಕ್ಕ-ಪಕ್ಕ ಅಂಗಡಿಗಳು ಮತ್ತು ವಾಸದ ಮನೆಗಳಿವೆ ಅಂದರೆ ಸರಿಯಲ್ಲ. ಶೇರವ ಸರ್ಕಲಿನಿಂದ ಅವ್ವೇರಹಳ್ಳಿಗೆ ರಸ್ತೆ ಇದೆ ಅಂದರೆ ಸರಿ. ಸದರಿ ರಸ್ತೆಯ ಅಕ್ಕ-ಪಕ್ಕ ಮನೆಗಳು ಮತ್ತು ಅಂಗಡಿಗಳಿವೆ ಅಂದರೆ ಸರಿ. ಶೇರವ ಸರ್ಕಲ್ ಅಕ್ಕ-ಪಕ್ಕ ಮನೆಗಳು ಮತ್ತು ಅಂಗಡಿಗಳಿವೆ ಅಂದರೆ ಸರಿ. ರಸ್ತೆಯ ಅಕ್ಕ-ಪಕ್ಕ ಮನೆಗಳು ಮತ್ತು ಅಂಗಡಿಗಳ ಸದರಿ ತೋಪಿನಲ್ಲಿ ತ್ಯಾಜ್ಯ ವಸ್ತುಗಳನ್ನು ಬಿಸಾಡುತ್ತಾರೆ ಅಂದರೆ ಗೊತ್ತಿಲ್ಲ.

**15.** ನಾನು ಅಮಾನತ್ತುಪಡಿಸಿಕೊಂಡ ಡ್ರಾಗರ್ ಹಿಡಿಕೆ ಬೇರ್ಪಟ್ಟಿತ್ತು. ಅಲ್ಲಿ ಪಕ್ಕ ಮನೆಯವರು ಯಾರೋ ಮುರಿದು ಹೋದ ಎಂ.ಓ.3 ನ್ನು ಬಿಸಾಡಿದ್ದು, ಅದನ್ನು ಈ ಕೇಸಿಗಾಗಿ ಸುಳ್ಳು ಸಾಕ್ಷಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯಿಂದ ಬಲವಂತವಾಗಿ ನಿಪಿ.10 ಸ್ವಇಚ್ಛಾ ಹೇಳಿಕೆಯನ್ನು ಪಡೆದಿದ್ದೇನೆ ಅಂದರೆ ಸರಿಯಲ್ಲ.

**16.** ಚಾಸಾ.12 ಮತ್ತು 14 ರವರನ್ನು ಗಾಯಾಳು ಹೇಳಿಕೆಯನ್ನು ಪಡೆದುಕೊಳ್ಳಲು ಆಸ್ಪತ್ರೆಗೆ ಕಳುಹಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪಿರ್ಯಾದಿಯ ಮುಂದುವರೆದ ಹೇಳಿಕೆಯನ್ನು ಪಡೆದಿಲ್ಲ ಅಂದರೆ ಸರಿಯಲ್ಲ.

**17.** ಆರೋಪಿ ನಮ್ಮನ್ನು ಕರೆದುಕೊಂಡು ಹೋಗಿ ಎಂ.ಓ.3 ನ್ನು ಹಾಜರುಪಡಿಸಿಲ್ಲ, ನಾನು ಪಂಚರ ಸಮಕ್ಷಮ ಸದರಿ ವಸ್ತುವನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

**18.** ಸಾಕ್ಷಿದಾರರ ಹೇಳಿಕೆಗಳನ್ನು ಈ ಕೇಸಿಗಾಗಿ ಸೃಷ್ಟಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**